ಸೌಜನ್ಯ ಮತ್ತು ವಿನಯವಂತಿಕೆ

ಖಲೀಫಾ ಉಮರ್ ಬಿನ್ ಅಬ್ದುಲ್ ಅಝೀಝ್ ರಹ್ಮತುಲ್ಲಾಹಿ ಅಲೈಹಿಯವರ ಬಳಿ ಓರ್ವ ವ್ಯಕ್ತಿ ಅತಿಥಿಯಾಗಿ ಬಂದರು. ಇಬ್ಬರೂ ಒಟ್ಟಿಗೆ ಕೂತು ಮಾತನಾಡುತ್ತಿರುವಾಗ ದೀಪವು ಆರತೊಡಗಿತು. ಉಮರ್ ಕುಳಿತಲ್ಲಿಂದ ಎದ್ದು ಹೋಗಿ ದೀಪದ ಬತ್ತಿಯನ್ನು ಸರಿಪಡಿಸಿದರು. ದೀಪವು ಮತ್ತೆ ಉರಿಯತೊಡಗಿತು. ಅತಿಥಿ ಹೇಳಿದರು, “ಅಮೀರುಲ್ ಮೂಮಿನೀನ್! ನೀವು ಸುಮ್ಮನೆ ಯಾಕೆ ತೊಂದರೆ ತಗೊಂಡಿರಿ. ನನಗೆ ಹೇಳುತ್ತಿದ್ದರೆ ಅಥವಾ ಸೇವಕನನ್ನು ಕರೆಯುತ್ತಿದ್ದರೆ ಆ ಕೆಲಸ ಆಗುತ್ತಿತ್ತಲ್ಲ.” ಅತಿಥಿಯ ಮಾತು ಕೇಳಿ ಉಮರ್(ರ) ನಸುನಗುತ್ತಾ ಹೇಳಿದರು, “ಸಹೋದರಾ! ನಾನು ಆಗಲೂ ಉಮರ್ ಆಗಿದ್ದೆ ಮತ್ತು ಈಗಲೂ ಉಮರ್ ಆಗಿದ್ದೇನೆ. ಏನೂ ಕಡಿಮೆಯಾಗಿಲ್ಲ ಅಥವಾ ಏನೂ ಹೆಚ್ಚಾಗಲಿಲ್ಲ.” ವಾಸ್ತವದಲ್ಲಿ, ಎಲ್ಲರಿಗಿಂತ ಹೆಚ್ಚು ವಿನಯವಂತನಾಗಿರುವವನೇ ಅಲ್ಲಾಹನ ಬಳಿ ಉತ್ತಮ ವ್ಯಕ್ತಿಯೆಂದು ಪರಿಗಣಿಸಲ್ಪಡುತ್ತಾನೆ.

ಅಬೂಬಕರ್ ಸಿದ್ದೀಕ್‌ರಿಗೆ(ರ) ಅವಶ್ಯಾರ್ಥಿಗಳಿಗೆ ಸಹಾಯ ಮಾಡುವ ಒಂದು ಅಭ್ಯಾಸವಿತ್ತು. ಉದಾಹರಣೆಗೆ ದುರ್ಬಲ ಅನಾಥ ಮಕ್ಕಳಿಗೆ ಆಡುಗಳ ಹಾಲು ಕರೆದು ಕೊಡುತ್ತಿದ್ದರು. ಅವರು ಖಿಲಾಫತ್‌ನ ಹೊಣೆಗಾರಿಕೆಯನ್ನು ವಹಿಸಿದ ಮೇಲೆ ಮದೀನದ ಆ ಅನಾಥ ಹೆಣ್ಣು ಮಕ್ಕಳು, ಈಗ ಅವರು ಖಲೀಫರಾಗಿದ್ದಾರೆ; ಇನ್ನು ಅವರು ನಮ್ಮ ಆಡುಗಳ ಹಾಲು ಕರೆದು ಕೊಡಲಾರರು ಎಂದು ಆಲೋಚಿಸತೊಡಗಿದರು. ಆದರೆ ಖಲೀಫರಾದ ಬಳಿಕವೂ ಅಬೂಬಕರ್‌ರವರ(ರ) ಸೌಜನ್ಯ ಮತ್ತು ವಿನಯವಂತಿಕೆಯಲ್ಲಿ ಎಳ್ಳಷ್ಟೂ ವ್ಯತ್ಯಾಸವುಂಟಾಗಲಿಲ್ಲ. ಖಿಲಾಫತ್‌ನ ಹೊಣೆಗಾರಿಕೆಯ ಹೊರತಾಗಿಯೂ ಅವರು ಆ ಹೆಣ್ಮಕ್ಕಳ ಆಡುಗಳ ಹಾಲು ಕರೆಯುತ್ತಿದ್ದರು; ದಿನನಿತ್ಯ ಓರ್ವ ವಯೋವೃದ್ಧೆಯ ಮನೆಗೆ ಹೋಗಿ ಕಸ ಗುಡಿಸುತ್ತಿದ್ದರು ಮತ್ತು ಆಕೆಯ ಇನ್ನಿತರ ಅಗತ್ಯದ ಕೆಲಸಗಳನ್ನು ಮಾಡಿ ಕೊಡುತ್ತಿದ್ದರು. ಉಸಾಮಾರ(ರ) ನೇತೃತ್ವದಲ್ಲಿ ಇಸ್ಲಾಮೀ ಸೇನೆಯು ರೋಮ್‌ನ ಸರಹದ್ದಿಗೆ ಹೊರಟಿತ್ತು. ಝೈದ್(ರ) ಮಗ ಉಸಾಮಾ(ರ) ಕುದುರೆಯಲ್ಲಿ ಸವಾರರಾಗಿದ್ದರು. ಖಲೀಫಾ ಅಬೂಬಕರ್(ರ) ಅವರನ್ನು ನಗರದಿಂದ ಬೀಳ್ಕೊಡಲಿಕ್ಕಾಗಿ ಹೊರಟಿದ್ದರು. ಅವರು ನಡೆದುಕೊಂಡು ಹೋಗುತ್ತಿದ್ದರು. ಉಸಾಮರಿಗೆ(ರ) ಅದನ್ನು ನೋಡಿ ಸಹಿಸಲಾಗಲಿಲ್ಲ. ಅವರೆಂದರು, “ಒಂದೋ ನೀವು ಕುದುರೆಯಲ್ಲಿ ಸವಾರರಾಗಿರಿ. ಇಲ್ಲವೇ ನನಗೆ ಕುದುರೆಯಿಂದ ಇಳಿದು ನಡೆಯಲು ಅನುಮತಿಸಿರಿ.” ಆಗ ಅಬೂಬಕರ್(ರ) ಅತ್ಯಂತ ವಿನಯಪೂರ್ವಕವಾಗಿ ಹೇಳಿದರು, “ನಾನು ಕುದುರೆಯೇರುವ ಅಗತ್ಯವೂ ಇಲ್ಲ, ನಿನಗೆ ಇಳಿದು ನಡೆಯುವ ಅಗತ್ಯವೂ ಇಲ್ಲ. ಅಲ್ಲಾಹನ ಹಾದಿಯಲ್ಲಿ ಸ್ವಲ್ಪ ಹೊತ್ತು ನನ್ನ ಕಾಲುಗಳಿಗೆ ಕೂಡ ಧೂಳು ಮೆತ್ತಿಕೊಂಡರೆ ಏನು ಕಳೆದುಕೊಳ್ಳುವುದಕ್ಕಿದೆ?”

ಓರ್ವ ವ್ಯಕ್ತಿ ತನ್ನ ಬೆನ್ನ ಮೇಲೆ ಗೋಧಿಹಿಟ್ಟಿನ ಚೀಲವನ್ನು ಹೊತ್ತುಕೊಂಡು ಒಂದು ಮನೆಗೆ ಪ್ರವೇಶಿಸುತ್ತಾರೆ. ಆ ಮನೆಯ ಮಂದಿ ಹಸಿದಿದ್ದರು. ಅನಾಥರಾಗಿದ್ದ ಆ ಮನೆಯ ಮಕ್ಕಳು ಹಸಿವಿನಿಂದ ಅಳುತ್ತಿದ್ದರು. ಪಾಪ ಅವರ ವಿಧವೆ ತಾಯಿಯ ಬಳಿ ಅವರಿಗೆ ನೀಡಲು ಏನೂ ಇದ್ದಿರಲಿಲ್ಲ. ಈ ವ್ಯಕ್ತಿಯು ಹಿಟ್ಟಿನ ಚೀಲವನ್ನು ತನ್ನ ಬೆನ್ನಿನಿಂದ ಇಳಿಸಿದರು, ಒಲೆ ಉರಿಸಿದರು ಮತ್ತು ಆಹಾರ ತಯಾರಾಗುವ ವರೆಗೆ ಒಲೆಯ ಬಳಿಯೇ ಕುಳಿತುಕೊಂಡಿದ್ದರು. ಈ ವ್ಯಕ್ತಿ ಬೇರಾರೂ ಅಲ್ಲ, ಆಗಿನ ಖಲೀಫಾ ಉಮರ್ ಫಾರೂಕ್(ರ) ಆಗಿದ್ದರು.

ಖಲೀಫಾ ಉಮರ್‌ರ(ರ) ಆಡಳಿತ ಕಾಲದಲ್ಲಿ ನಡೆದ ಇನ್ನೊಂದು ಘಟನೆ. ಫಾರಸ್(ಇರಾನ್)ನಿಂದ ಕಿಸ್ರಾ(ಖುಸ್ರೋ)ನ ದೂತನು ಮದೀನಕ್ಕೆ ಆಗಮಿಸಿದ. ಆತ ಖಲೀಫರ ಅರಮನೆಯ ವಿಳಾಸವನ್ನು

ಕೇಳಿದ. ಜನರು ಹೇಳಿದರು, "ನಮ್ಮ ಖಲೀಫರಿಗೆ ಅರಮನೆ ಇಲ್ಲ." ಆತ ಖಲೀಫರನ್ನು ಭೇಟಿಯಾಗುವ ಇಚ್ಛೆ ವ್ಯಕ್ತಪಡಿಸಿದ. ಜನರು ಅವನನ್ನು ಖಲೀಫಾ ಉಮರ್‌ರ(ರ) ಬಳಿಗೆ ಕರಕೊಂಡು ಹೋದರು. ಆ ಸಮಯದಲ್ಲಿ ಅವರು ಮರವೊಂದರ ಕೆಳಗೆ ಒಬ್ಬಂಟಿಯಾಗಿ ಮಲಗಿದ್ದರು. ದೂತನಿಗೆ ಆಶ್ಚರ್ಯವಾಯಿತು. ಯಾವ ಉಮರ್‌ರ(ರ) ಹೆಸರು ಕೇಳುತ್ತಲೇ ಆ ಕಾಲದ ದೊಡ್ಡ ದೊಡ್ಡ ಅರಸರೂ ಕಂಪಿಸುತ್ತಿದ್ದರೋ ಆ ಉಮರ್(ರ) ಅರಮನೆ, ದರ್ಬಾರು, ರಕ್ಷಣಾ ಪಡೆ, ಸೇವಕರು ಅಂತ ಯಾವುದೇ ಆಡಂಬರ ಇಲ್ಲದೆ ಒಬ್ಬಂಟಿಯಾಗಿ ಮರವೊಂದರ ನೆರಳಲ್ಲಿ ಅಪಾಯದ ಪರಿವೆಯಿಲ್ಲದೆ ನಿರ್ಭಯರಾಗಿ ಮಲಗಿದ್ದಾರೆ! ಈ ದೂತನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಆತನ ಬಾಯಿಯಿಂದ ಆಯಾಚಿತವಾಗಿ ಈ ಮಾತು ಹೊರಟಿತು, "ಓ ಉಮರ್! ನೀವು ನ್ಯಾಯ–ಸಮಾನತೆಯ ಆಡಳಿತವನ್ನು ನೀಡಿರುವಿರಿ. ಆದ್ದರಿಂದಲೇ ನಿರ್ಭಯರಾಗಿ, ಅಪಾಯದ ಪರಿವೆಯಿಲ್ಲದೆ ನಿಶ್ಚಿಂತೆಯಿಂದ ಮಲಗಿದ್ದೀರಿ..."

ಮದ್‌ಯನ್ ಎಂಬುದು ಇರಾನಿನ ಒಂದು ನಗರವಾಗಿದೆ. ಸಲ್ಮಾನ್(ರ) ಅದರ ಪಾಲಕನಾಗಿ ನೇಮಿಸಲ್ಪಟ್ಟಿದ್ದರು. ಅವರು ಸತ್ಯವನ್ನರಸುತ್ತಾ ಒಬ್ಬಂಟಿಯಾಗಿ ಇರಾನ್‌ನಿಂದ ಹೊರಟಿದ್ದರು. ಅವರು ಸಲ್ಮಾನ್ ಫಾರ್ಸಿ(ರ) ಎಂದೇ ಹೆಸರುವಾಸಿಯಾಗಿದ್ದರು. ಅವರ ಸುತ್ತಲೂ ಕುರೈಶ್‌ನ ಸರದಾರರು ಕುಳಿತಿದ್ದಾರೆ. ಅವರು ತಮ್ಮ ಕುಲ–ಗೋತ್ರ, ಸಂಪತ್ತು–ಸ್ಥಾನಮಾನ ಇತ್ಯಾದಿಗಳ ಬಗ್ಗೆ ಜಂಭಕೊಚ್ಚುತ್ತಿದ್ದರು. ಸಲ್ಮಾನ್ ಫಾರ್ಸಿ(ರ) ಎಲ್ಲವನ್ನೂ ಆಲಿಸಿದರು. ಕೊನೆಯಲ್ಲಿ ತಮ್ಮ ಸರದಿ ಬಂದಾಗ ಹೀಗೆಂದರು, "ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಆರಂಭವು ತುಚ್ಛವಾದ ಮಲಿನ ನೀರಿನ ಹನಿಯಿಂದಾಗಿತ್ತು. ಬಳಿಕ ನಾನು ನಿರ್ಜೀವ ಶವವಾಗಿ ಬದಲಾಗುವೆನು. ಆಮೇಲೆ ತಕ್ಕಡಿ ಸ್ಥಾಪಿಸಲಾಗುವುದು. ಅದರಲ್ಲಿ ನಾನು ಭಾರವಾಗಿ ಮೂಡಿ ಬಂದರೆ, ಗೌರವಾರ್ಹನೂ ಅಭಿಮಾನಾರ್ಹನೂ ಆಗುವೆನು; ಆದರೆ ಒಂದು ವೇಳೆ ನಾನು ಹಗುರವಾಗಿ ಮೂಡಿ ಬಂದರೆ, ಖಂಡಿತವಾಗಿಯೂ ಅವಮಾನಿತ ಹಾಗು ನಷ್ಟದಲ್ಲಾಗುವೆನು."

ಸೌಜನ್ಯ ಎಂದರೇನು?

ಸೌಜನ್ಯ ಎಂದರೆ, ವ್ಯಕ್ತಿಯು ವಿನಮ್ರನಾಗಿರಬೇಕು, ಅಹಂಕಾರಿಯೋ ಜಂಭಕೊಚ್ಚುವವನೋ ಆಗಿರಬಾರದು; ಅವನು ತನ್ನನ್ನು ಇತರರಿಗಿಂತ ಮಿಗಿಲು ಎಂದೋ ಇತರರು ತನಗಿಂತ ಕೀಳು ಎಂದೋ ಭಾವಿಸಬಾರದು; ಅಂತಹ ಮಾತನ್ನು ಆಲೋಚಿಸಲೂ ಬಾರದು, ನಾಲಗೆಯಿಂದ ಹೊರಡಿಸಲೂ ಬಾರದು ಮತ್ತು ತನ್ನ ವ್ಯವಹಾರಗಳಲ್ಲೂ ಅದನ್ನು ವ್ಯಕ್ತಪಡಿಸಬಾರದು. ಓರ್ವ ವಿಶ್ವಾಸಿಯು ಪ್ರತಿಯೊಬ್ಬನನ್ನೂ ಗೌರವಿಸುತ್ತಾನೆ – ಆತ ಧನಿಕನಿರಲಿ ಅಥವಾ ಬಡವನಿರಲಿ, ದುರ್ಬಲನಿರಲಿ ಅಥವಾ ಬಲಶಾಲಿಯೇ ಇರಲಿ. ಅಲ್ಲಾಹನು ಇಂತಹುದೇ ವಿನಯವಂತಿಕೆಯನ್ನು ಆದೇಶಿಸಿರುವನು.

﴿ وَٱخۡفِضۡ جَنَاحَكَ لِمَنِ ٱتَّبَعَكَ مِنَ ٱلۡمُؤۡمِنِينَ ٢١٥ ﴾ الشعراء: ٢١٥

"ಸತ್ಯವಿಶ್ವಾಸಿಗಳ ಪೈಕಿ ನಿಮ್ಮನ್ನು ಅನುಸರಿಸುವವರೊಂದಿಗೆ ಸೌಜನ್ಯದಿಂದ ವರ್ತಿಸಿರಿ." (ಪವಿತ್ರ ಕುರ್‌ಆನ್: 26: 215)

ಇನ್ನೊಂದೆಡೆ ಹೀಗೆ ಹೇಳಲಾಗಿದೆ,

﴿ تِلۡكَ ٱلدَّارُ ٱلۡأٓخِرَةُ نَجۡعَلُهَا لِلَّذِينَ لَا يُرِيدُونَ عُلُوّٗا فِي ٱلۡأَرۡضِ وَلَا فَسَادٗاۚ وَٱلۡعَٰقِبَةُ لِلۡمُتَّقِينَ ٨٣ ﴾ القصص: ٨٣

"ನಾವು ಆ ಪರಲೋಕದ ಗೃಹವನ್ನು ಭೂಮಿಯಲ್ಲಿ ತಮ್ಮ ದೊಡ್ಡಸ್ತಿಕೆಯನ್ನು ಬಯಸದವರಿಗಾಗಿ ಹಾಗೂ ಕ್ಷೋಭೆಯನ್ನುಂಟು ಮಾಡಬಯಸದವರಿಗಾಗಿ ಕಾದಿರಿಸುವೆವು. ಅಂತಿಮ ವಿಜಯವು ಧರ್ಮನಿಷ್ಠರಿಗಾಗಿಯೇ ಇದೆ." (ಪವಿತ್ರ ಕುರ್‌ಆನ್: 28: 83)

ಪ್ರಸಿದ್ಧ ವಿದ್ವಾಂಸರಾದ ತುಫೈಲ್ ಬಿನ್ ಅಯಾಝ್‌ರೊಂದಿಗೆ(ರ) ಸೌಜನ್ಯದ ಕುರಿತು ವಿಚಾರಿಸಿದಾಗ ಅವರು ಹೀಗೆಂದರು, "ಸೌಜನ್ಯ ಎಂದರೆ, ನೀನು ಸತ್ಯದ ಮುಂದೆ ತಲೆ ಬಾಗಬೇಕು ಮತ್ತು ಅದನ್ನು ಅನುಸರಿಸಬೇಕು; ಈ ಹಕ್ಕನ್ನು ಒಬ್ಬ ಮಗು ನಿನ್ನ ಮುಂದೆ ವ್ಯಕ್ತಪಡಿಸಿದ್ದರೂ ಸರಿ ಅಥವಾ ತಿಳಿಗೇಡಿಯಾದ ಅಜ್ಞಾನಿಯು ವ್ಯಕ್ತಿಪಡಿಸಿದ್ದರೂ ಸರಿಯೇ." ಖಲೀಫಾ ಅಬೂಬಕರ್(ರ) ಹೀಗೆಂದಿದ್ದಾರೆ, "ನಿಮ್ಮ ಪೈಕಿ ಯಾರೂ ಎಂದಿಗೂ ಯಾರನ್ನೂ ತುಚ್ಛನೆಂದು ಭಾವಿಸಬಾರದು. ಏಕೆಂದರೆ ಮುಸ್ಲಿಮರ ಪೈಕಿ ಅತಿಸಣ್ಣ ವ್ಯಕ್ತಿಯೂ ಅಲ್ಲಾಹನ ಬಳಿ ದೊಡ್ಡವನಾಗಿದ್ದಾನೆ." 'ಸೌಜನ್ಯವೆಂಬುದು ಮಾನವನ ಕಿರೀಟವಾಗಿದೆ' ಎಂಬ ಲೋಕೋಕ್ತಿಯೇ ಇದೆ.

ಪ್ರವಾದಿವರ್ಯರ(ಸ) ಸೌಜನ್ಯ

ಅಲ್ಲಾಹನು ಪ್ರವಾದಿವರ್ಯರನ್ನು(ಸ) ಸಚ್ಚಾರಿತ್ರ್ಯದ ಪರಿಪೂರ್ಣತೆಗಾಗಿ ನಿಯೋಜಿಸಿದ್ದನು. ಹೀಗೆ ಪ್ರವಾದಿವರ್ಯರ(ಸ) ವ್ಯಕ್ತಿತ್ವವು ಪರಿಪೂರ್ಣ ಚಾರಿತ್ರ್ಯವಾಗಿತ್ತು. ಅವರ ಜೀವನದಲ್ಲಿ ಸೌಜನ್ಯದ ಮಗ್ಗುಲು ಬಹಳ ಎದ್ದು ಕಾಣುತ್ತಿತ್ತು. ಈ ನಿಟ್ಟಿನಲ್ಲಿಯೂ ಅವರು ಮಾನವತೆಗೆ ಪರಿಪೂರ್ಣ ಮತ್ತು ಅನುಸರಣಾರ್ಹ ಮಾದರಿಯಾಗಿದ್ದರು. ಸತ್ಯವಿಶ್ವಾಸಿಗಳ ಮಾತೆ ಆಯಿಶಾರೊಡನೆ(ರ) ಅಲ್ಲಾಹನ ಸಂದೇಶವಾಹಕರು ಮನೆಯಲ್ಲಿ ಹೇಗಿರುತ್ತಿದ್ದರು ಎಂದು ಕೇಳಲಾದಾಗ ಅವರೆಂದರು, "ಅಲ್ಲಾಹನ ಸಂದೇಶವಾಹಕರು(ಸ) ಮನೆಯ ಕೆಲಸ–ಕಾರ್ಯಗಳಲ್ಲಿ ಕುಟುಂಬಿಕರಿಗೆ ಸಹಾಯ ಮಾಡುತ್ತಿದ್ದರು. ಆದರೆ ನಮಾಝ್‌ನ ಸಮಯವಾದ ಕೂಡಲೇ ಎಲ್ಲವನ್ನೂ ಬಿಟ್ಟು ನಮಾಝ್‌ಗಾಗಿ ಹೊರಟು ಬಿಡುತ್ತಿದ್ದರು." (ಬುಖಾರಿ)

ಅಲ್ಲಾಹನ ಸಂದೇಶವಾಹಕರು(ಸ) ಆಡುಗಳ ಹಾಲು ಕರೆಯುತ್ತಿದ್ದರು, ತಮ್ಮ ಚಪ್ಪಲಿಯನ್ನು ಸ್ವತಃ ರಿಪೇರಿ ಮಾಡುತ್ತಿದ್ದರು, ತಮ್ಮ ವಸ್ತ್ರಗಳಿಗೆ ತೇಪೆಯನ್ನೂ ಸ್ವತಃ ಹಚ್ಚುತ್ತಿದ್ದರು, ಉಣ್ಣಲು ಕುಳಿತಾಗ ಸೇವಕರನ್ನೂ ಹತ್ತಿರ ಕುಳ್ಳಿರಿಸುತ್ತಿದ್ದರು, ಮಾರುಕಟ್ಟೆಗೆ ಹೋದರೆ ತಮ್ಮ ದಿನಸಿ ವಸ್ತುಗಳನ್ನು ಸ್ವತಃ ಖರೀದಿಸುತ್ತಿದ್ದರು ಮತ್ತು ಮಾರುಕಟ್ಟೆಯಿಂದ ಮನೆಗೆ ಸ್ವಯಂ ಹೊತ್ತುಕೊಂಡು ಹೋಗುತ್ತಿದ್ದರು, ಯಾರಾದರೂ ಎದುರ್ಗೊಂಡರೆ ಮೊದಲು ಸಲಾಮ್ ಹೇಳುತ್ತಿದ್ದರು, ಹಸ್ತಲಾಘವ ಮಾಡುತ್ತಿದ್ದರು; ಈ ನಿಟ್ಟಿನಲ್ಲಿ ಹಿರಿಯರು–ಕಿರಿಯರು, ಕರಿಯರು–ಬಿಳಿಯರು ಮತ್ತು ಸ್ವತಂತ್ರರು–ಗುಲಾಮರು ಎಂದು ಭೇದ ಮಾಡುತ್ತಿರಲಿಲ್ಲ. ಅವರು(ಸ) ಎಲ್ಲ ಸಹಾಬಿಗಳೊಡನೆಯೂ ಏಕ ಪ್ರಕಾರವಾಗಿ ವ್ಯವಹರಿಸುತ್ತಿದ್ದರು ಮತ್ತು ಎಲ್ಲ ಸಣ್ಣ–ದೊಡ್ಡ ಕೆಲಸಗಳಲ್ಲಿಯೂ ಅವರಿಗೆ ಸಹಾಯ ಮಾಡುತ್ತಿದ್ದರು.

ಮಕ್ಕಾ ವಿಜಯದ ವೇಳೆ ಪ್ರವಾದಿವರ್ಯರು(ಸ) ಮಕ್ಕಾ ವಿಜಯಿಯಾಗಿ ನಗರವನ್ನು ಪ್ರವೇಶಿಸುವಾಗ, ಅವರ ಸೌಜನ್ಯ ಮತ್ತು ವಿನಯವಂತಿಕೆಯ ಅವಸ್ಥೆ ಏನಾಗಿತ್ತೆಂದರೆ, ಸರ್ವಲೋಕಗಳ ಒಡೆಯನ ಮುಂದೆ ಅವರು ತಲೆ ಬಾಗಿಕೊಂಡಿದ್ದರು; ಅವರ ತಲೆಯು ಒಂಟೆಯ ಬೆನ್ನಿಗೆ ತಾಗುತ್ತದೋ ಎಂದು ಭಾವಿಸುವಷ್ಟು ಬಾಗಿಕೊಂಡಿತ್ತು. ಪ್ರವಾದಿವರ್ಯರು(ಸ) ತಮ್ಮನ್ನೂ ತಮ್ಮ ಸಂಗಡಿಗರನ್ನೂ ತರತರವಾಗಿ ಸತಾಯಿಸಿದ ಮಕ್ಕಾ ವಾಸಿಗಳನ್ನು ಕ್ಷಮಿಸಿದ್ದು, ಪ್ರವಾದಿವರ್ಯರ(ಸ) ಸೌಜನ್ಯವಲ್ಲದೆ ಇನ್ನೇನು? ಅವರು ಎಲ್ಲರನ್ನೂ ಕ್ಷಮಿಸುತ್ತಾ ಹೀಗೆಂದರು,

«اذْهَبُوا فَأَنْتُمُ الطُّلَقَاءُ» (ابن هشام ، سيرة)

"ಹೋಗಿ ಇಂದು ನೀವೆಲ್ಲರೂ ಸ್ವತಂತ್ರರು." (ಸೀರತ್ ಇಬ್ನು ಹಿಶಾಮ್)

ಸೌಜನ್ಯ ಮತ್ತು ವಿನಯವಂತಿಕೆಯು ಒಂದು ಉನ್ನತವಾದ ಗುಣವಾಗಿದೆ. ಮಾನವನಲ್ಲಿ ಇದು ಬೆಳೆಯಿತೆಂದರೆ, ಅವನು ಅಲ್ಲಾಹನಿಗೆ ತೀರಾ ನಿಕಟನಾಗುತ್ತಾನೆ. ಅವನು ಅಲ್ಲಾಹನ ಅನುಸರಣೆ

www.islamkannada.com

ಮತ್ತು ಆಜ್ಞಾಪಾಲನೆಯಲ್ಲಿ ಸದಾ ಸಕ್ರಿಯನಾಗಿರುತ್ತಾನೆ. ಅಲ್ಲಾಹನ ಆಜ್ಞೆ ಮತ್ತು ಫರಮಾನುಗಳ ಮುಂದೆ ಸದಾ ತಲೆ ಬಾಗಿಕೊಂಡಿರುತ್ತಾನೆ. ಅವನ ಮನದಲ್ಲಿ ದೇವಾಜ್ಞೋಲ್ಲಂಘನೆಯ ಕಲ್ಪನೆಯೂ ಮೂಡಲಾರದು. ಅದೇ ರೀತಿ ಈ ಗುಣವು ಅವನನ್ನು ಅಲ್ಲಾಹನ ಸಂದೇಶವಾಹಕರ(ಸ) ವಿಷಯದಲ್ಲಿಯೂ ಬಹಳ ಸಂವೇದನಾಶೀಲನನ್ನಾಗಿ ಮಾಡುತ್ತದೆ. ಪ್ರವಾದಿಚರ್ಯೆಯ ಅನುಕರಣೆ ಮತ್ತು ಅವರ ವಿಧಾನದ ಅನುಸರಣೆಯು ಅವನ ಆತ್ಮಕ್ಕೆ ಅತಿ ಪ್ರಿಯವಾದ ಆಹಾರವಾಗಿ ಮಾರ್ಪಡುತ್ತದೆ. ಅವನು ಸಾಮಾನ್ಯ ಮುಸ್ಲಿಮರೊಡನೆ ವಿನಯ ಮತ್ತು ಪ್ರೀತಿಯಿಂದ ವ್ಯವಹರಿಸುತ್ತಾನೆ. ಅಹಂಕಾರ ಮತ್ತು ಗರ್ವದಿಂದ ಮಾರು ದೂರವಿರುತ್ತಾನೆ. ಜನರ ಹಕ್ಕುಗಳನ್ನು ತೀರಿಸುತ್ತಾನೆ ಮತ್ತು ಅವರ ಗೌರವವನ್ನು ಕಾಪಾಡುತ್ತಾನೆ.

ಸೌಜನ್ಯದ ಮಹತ್ವ

ಚಿತ್ತಶುದ್ಧಿಯು ಸೌಜನ್ಯದ ಅನಿವಾರ್ಯ ಬೇಡಿಕೆಯಾಗಿದೆ. ಈ ಗುಣ ಇರುವಲ್ಲಿ ಖಂಡಿತವಾಗಿಯೂ ಪರಸ್ಪರ ಪ್ರೀತಿ ಮತ್ತು ಸಾಹೋದರ್ಯವಿರುವುದು. ಹಿತಚಿಂತನೆ ಮತ್ತು ಸಹಾನುಭೂತಿ ಕಾಣಸಿಗುವುದು. ಪರಸ್ಪರ ಗೌರವ ಮತ್ತು ಸಮಾನತೆ ಇರುವುದು. ವೈರ, ದ್ವೇಷ, ಅಸೂಯೆಗೆ ಅವಕಾಶ ಇರದು. ಇವೆಲ್ಲಕ್ಕೂ ಮಿಗಿಲಾಗಿ, ಅಲ್ಲಾಹನ ಸಂಪ್ರೀತಿ ಅವನಿಗೆ ಲಭಿಸುವುದು. ಪ್ರವಾದಿವರ್ಯರು(ಸ) ಹೀಗೆಂದಿದ್ದಾರೆ,

«مَا نَقَصَتْ صَدَقَةٌ مِنْ مَالٍ، وَمَا زَادَ اللَّهُ عَبْدًا بِعَفْوٍ إِلَّا عِزًّا، وَمَا تَوَاضَعَ أَحَدٌ لِلَّهِ إِلَّا رَفَعَهُ اللَّهُ» (مسلم)

"ಸದಕಾ (ದಾನ) ನೀಡುವುದರಿಂದ ಸಂಪತ್ತು ಕಡಿಮೆಯಾಗುವುದಿಲ್ಲ. ದಾಸನು ಯಾರನ್ನಾದರೂ ಕ್ಷಮಿಸಿದಾಗ ಅಲ್ಲಾಹನು ಅವನನ್ನು ಗೌರವಾರ್ಹನನ್ನಾಗಿಸುವನು ಮತ್ತು ಯಾರಾದರೂ ಅಲ್ಲಾಹನಿಗಾಗಿ ಸೌಜನ್ಯ–ವಿನಯವಂತಿಕೆಯನ್ನು ತನ್ನದಾಗಿಸಿದರೆ, ಅಲ್ಲಾಹನು ಅವನನ್ನು ಉನ್ನತಗೊಳಿಸುವನು." (ಮುಸ್ಲಿಮ್)

ಇನ್ನೊಂದು ವರದಿಯಲ್ಲಿ ಪ್ರವಾದಿವರ್ಯರು(ಸ) ಹೀಗೆಂದಿದ್ದಾರೆ,

«وَإِنَّ اللهَ أَوْحَى إِلَيَّ أَنْ تَوَاضَعُوا حَتَّى لَا يَفْخَرَ أَحَدٌ عَلَى أَحَدٍ، وَلَا يَبْغِي أَحَدٌ عَلَى أَحَدٍ»(مسلم)

"ಅಲ್ಲಾಹನು ನನಗೆ ಹೀಗೆ ಆಜ್ಞಾಪಿಸಿದ್ದಾನೆ: ಜನರು ಸೌಜನ್ಯವಂತರಾಗಬೇಕು, ಪರಸ್ಪರರ ಮುಂದೆ ಜಂಭ ಕೊಚ್ಚಿಕೊಳ್ಳಬಾರದು ಮತ್ತು ಯಾರೂ ಯಾರ ಮೇಲೂ ಅತಿರೇಕವೆಸಗಬಾರದು." (ಮುಸ್ಲಿಮ್)

ಕವಿವಾಣಿ ಹೇಳುವಂತೆ,

ಭುವಿಯಲ್ಲಿ ಬಾಳಿದರೆ ವಿನಯವಂತನಾಗಿ
ದೇವಾನುಗ್ರಹವು ರಕ್ಷಿಸುವುದು ಆಗಸವಾಗಿ

ಅಹಂಕಾರ

ಸೌಜನ್ಯ ಮತ್ತು ವಿನಯವಂತಿಕೆಯ ವಿರುದ್ಧ ಗುಣವಾಗಿದೆ ಅಹಂಕಾರ ಮತ್ತು ಜಂಭ. ದೇವನ ಓರ್ವ ಸೃಷ್ಟಿಯಾಗಿರುವ ಮಾನವನು ಎಲ್ಲ ರೀತಿಯಿಂದಲೂ ಇತರರಿಗೆ ಅವಲಂಬಿತನಾಗಿದ್ದಾನೆ. ಅವನಿಗೆ ಅಹಂಕಾರವು ಎಳ್ಳಷ್ಟೂ ಶೋಭಿಸುವುದಿಲ್ಲ. ಒಂದು ವೇಳೆ ಮಾನವನು ತನ್ನ ಅಸ್ತಿತ್ವದ ಬಗ್ಗೆ ಚಿಂತಿಸಿದರೆ, ಎಂದಿಗೂ ಅಹಂಕಾರ ತೋರಲಾರನು. ಒಂದು ಕುದ್ಸೀ ಹದೀಸ್‌ನಲ್ಲಿ ಅಲ್ಲಾಹನು ಹೀಗೆಂದಿದ್ದಾನೆ,

«الْكِبْرِيَاءُ رِدَائِي، وَالْعَظَمَةُ إِزَارِي، فَمَنْ نَازَعَنِي وَاحِدًا مِنْهُمَا، قَذَفْتُهُ فِي النَّارِ» (مسلم ، أبو داوود ، ترمذي)

www.uzairfalahi.com

“ಅಹಂಕಾರವು ನನ್ನ ಚದ್ದರವಾಗಿದೆ ಮತ್ತು ಶ್ರೇಷ್ಠತೆ ಮತ್ತು ದೊಡ್ಡಸ್ತಿಕೆಯು ನನ್ನ ಪೈಜಾಮವಾಗಿದೆ. ಯಾರಾದರೂ ಈ ವಿಷಯವಾಗಿ ನನ್ನೊಡನೆ ಜಗಳಾಡುವನೋ ಅವನನ್ನು ನಾನು ಬೆಂಕಿಗೆ ನೂಕುವೆನು.” (ಮುಸ್ಲಿಮ್, ಅಬೂದಾವೂದ್, ತಿರ್ಮಿದಿ)

ಯಾರ ಮೆದುಳಲ್ಲಿ ಅಹಂಕಾರವು ತುಂಬಿಕೊಳ್ಳುವುದೋ ಅವನು ತನ್ನನ್ನು ಇತರರಿಗಿಂತ ಶ್ರೇಷ್ಠ ಮತ್ತು ಉನ್ನತನೆಂದು ಭಾವಿಸತೊಡಗುತ್ತಾನೆ. ಅವನಿಗೆ ಸಾಮಾಜಿಕ ವೈರಿಗಳು ಅನೇಕರಿರುವರು. ಸಾಮಾಜಿಕ ಐಕ್ಯತೆಯು ಅವನಿಂದಾಗಿ ಛಿದ್ರಛಿದ್ರವಾಗುವುದು. ದ್ವೇಷವು ಅಹಂಕಾರದ ಫಲಶ್ರುತಿಯಾಗಿದೆ. ಶತ್ರುತ್ವವು ಅದರ ಪರಿಣಾಮವಾಗಿದೆ. ಅದೊಂದು ರೀತಿಯ ರೋಗವಾಗಿದೆ. ಈ ರೋಗ ಬಾಧಿಸಲ್ಪಟ್ಟವನಿಂದ ಒಳಿತು ಹೊರಟು ಹೋಗುತ್ತದೆ. ಆಮೇಲೆ ಅವನು ಒಳ್ಳೆಯ ಮಾತನ್ನು ಆಲಿಸುವುದೂ ಇಲ್ಲ; ಒಳ್ಳೆಯ ಸಲಹೆಯನ್ನು ಸ್ವೀಕರಿಸುವುದೂ ಇಲ್ಲ. ಅವನು ಸಮಾಜದಿಂದ ದೂರವುಳಿದು ಬಿಡುತ್ತಾನೆ. ಬಳಿಕ ಶೈತಾನನು ಅವನನ್ನು ಪಾಪಗಳ ವಿವಿಧ ಕಣಿವೆಗಳಲ್ಲಿ ಸುತ್ತಾಡಿಸುತ್ತಾನೆ. ಅಲ್ಲಾಹನು ತನ್ನ ದಾಸರಿಗೆ ಈ ರೀತಿ ಉಪದೇಶಿಸಿದ್ದಾನೆ,

﴿وَلَا تُصَعِّرْ خَدَّكَ لِلنَّاسِ وَلَا تَمْشِ فِي ٱلْأَرْضِ مَرَحًا ۖ إِنَّ ٱللَّهَ لَا يُحِبُّ كُلَّ مُخْتَالٍ فَخُورٍ ﴿١٨﴾﴾ لقمان: ١٨

“ಜನರೊಡನೆ ಮುಖ ತಿರುಗಿಸಿ ಮಾತನಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ.” (ಪವಿತ್ರ ಕುರ್‌ಆನ್: 31: 18)

ಅಲ್ಲಾಹ್ ಅಹಂಕಾರ ಪಡುವವರಿಗೆ ಕಠಿಣ ಎಚ್ಚರಿಕೆ ನೀಡುತ್ತಾ ಹೀಗೆಂದಿದ್ದಾನೆ,

﴿سَأَصْرِفُ عَنْ ءَايَٰتِيَ ٱلَّذِينَ يَتَكَبَّرُونَ فِي ٱلْأَرْضِ بِغَيْرِ ٱلْحَقِّ ﴿١٤٦﴾﴾ الأعراف: ١٤٦

“ಅನ್ಯಾಯವಾಗಿ ಭೂಮಿಯಲ್ಲಿ ಅಹಂಕಾರ ಪಡುವವರ ದೃಷ್ಟಿಗಳನ್ನು ನನ್ನ ನಿದರ್ಶನಗಳಿಂದ ತಿರುಗಿಸಿ ಬಿಡುವೆನು.” (ಪವಿತ್ರ ಕುರ್‌ಆನ್: 7: 146)
ಇನ್ನೊಂದೆಡೆ ಹೀಗೆಂದಿದ್ದಾನೆ,

﴿كَذَٰلِكَ يَطْبَعُ ٱللَّهُ عَلَىٰ كُلِّ قَلْبِ مُتَكَبِّرٍ جَبَّارٍ ﴿٣٥﴾﴾ غافر: ٣٥

“ಅಲ್ಲಾಹ್ ಪ್ರತಿಯೊಬ್ಬ ಅಹಂಕಾರಿ ಹಾಗೂ ಮದಾಂಧನ ಹೃದಯಕ್ಕೆ ಮುದ್ರೆಯೊತ್ತಿ ಬಿಡುತ್ತಾನೆ.” (ಪವಿತ್ರ ಕುರ್‌ಆನ್: 40: 35)

ಅಲ್ಲಾಹನ ಪ್ರೀತಿಯು ಸತ್ಯವಿಶ್ವಾಸಿಗಳ ಅತಿದೊಡ್ಡ ಆಶ್ರಯ ಮತ್ತು ಎಲ್ಲಕ್ಕಿಂತಲೂ ಮಿಗಿಲಾದ ಅನುಗ್ರಹವಾಗಿದೆ. ಅಹಂಕಾರ ಪಡುವವರು ಇದರಿಂದ ಸಂಪೂರ್ಣವಾಗಿ ವಂಚಿತರಾಗುತ್ತಾರೆ. ಅಲ್ಲಾಹ್ ಹೇಳುತ್ತಾನೆ,

﴿إِنَّهُۥ لَا يُحِبُّ ٱلْمُسْتَكْبِرِينَ ﴿٢٣﴾﴾ النحل: ٢٣

“ಅಹಂಭಾವದಲ್ಲಿ ಸಿಲುಕಿರುವವರನ್ನು ಅಲ್ಲಾಹ್ ಖಂಡಿತವಾಗಿಯೂ ಮೆಚ್ಚುವುದಿಲ್ಲ.” (ಪವಿತ್ರ ಕುರ್‌ಆನ್: 16: 27)
ಅಲ್ಲಾಹನ ಪ್ರೀತಿಯಿಂದ ವಿಮುಖತೆಯು ವ್ಯಕ್ತಿಯನ್ನು ನರಕಕ್ಕೆ ಕೊಂಡೊಯ್ಯುವುದು,

﴿أَلَيْسَ فِي جَهَنَّمَ مَثْوًى لِّلْمُتَكَبِّرِينَ ﴿٦٠﴾﴾ الزمر: ٦٠

“ದುರಹಂಕಾರಿಗಳಿಗೆ ನರಕದಲ್ಲಿ ಸಾಕಷ್ಟು ಸ್ಥಳವಿಲ್ಲವೇ?” (ಪವಿತ್ರ ಕುರ್‌ಆನ್: 39: 60)

www.uzaifalahi.com

ಅಹಂಕಾರ ಪಡುವವರ ಅವಸ್ಥೆಯೂ ಬಹಳ ವಿಚಿತ್ರವಾಗಿರುತ್ತದೆ. ಅವರು ಅಲ್ಲಾಹನು ತಮಗೆ ನೀಡಿರುವುದರ ಬಗ್ಗೆಯೇ ಅಹಂಕಾರ ಪಡುತ್ತಾರೆ; ವಸ್ತುತಃ ಅವರು ಅದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆಯನ್ನು ಅರ್ಪಿಸಬೇಕಿತ್ತು. ಅಹಂಕಾರವು ವಸ್ತುತಃ ಅಜ್ಞಾನದಿಂದ ಹುಟ್ಟಿಕೊಳ್ಳುತ್ತದೆ ಮತ್ತು ಮಾನವನ ಸಂವೇದನಾಶೂನ್ಯತೆ ಹಾಗೂ ಉಪಕಾರಗೇಡಿ ಬುದ್ಧಿಯು ಅದಕ್ಕೆ ನೀರೆರೆಯುತ್ತದೆ. ವ್ಯಕ್ತಿಯು ತನಗೆ ಅಲ್ಲಾಹನು ಒದಗಿಸಿದ ವಿದ್ಯೆಯ ಕುರಿತು ಅಹಂಕಾರ ಪಡುತ್ತಾನೆ. ಅಲ್ಲಾಹನು ನೀಡಿರುವ ಸಾಮರ್ಥ್ಯವನ್ನು ಬಳಸಿಯೇ ಮಾನವನು ವಿದ್ಯೆಯನ್ನು ಗಳಿಸುತ್ತಾನೆ. ಹೀಗೆ ಅಲ್ಲಾಹನು ವಿದ್ಯೆ–ಜ್ಞಾನವನ್ನು ದಯಪಾಲಿಸಿದಾಗ, ಮಾನವನು ಅದೇ ಅನುಗ್ರಹದ ಬಗ್ಗೆ ಜಂಭ ಪಟ್ಟುಕೊಳ್ಳತೊಡಗುತ್ತಾನೆ; ಇತರರನ್ನು ತುಚ್ಛರೆಂದೂ ತನ್ನನ್ನು ಉನ್ನತನೆಂದೂ ಭಾವಿಸತೊಡಗುತ್ತಾನೆ. ಅದೇ ರೀತಿ ಮಾನವನು ತನ್ನ ಕುಲ–ಗೋತ್ರದ ಬಗ್ಗೆ ಜಂಭಪಡುತ್ತಾನೆ; ಆದರೆ ಅದರಲ್ಲಿ ಅವನ ಪಾತ್ರವು ಎಳ್ಳು ಕಾಳಿನಷ್ಟೂ ಇರುವುದಿಲ್ಲ. ವಸ್ತುತಃ ಅಲ್ಲಾಹನು ತನಗಿಷ್ಟ ಬಂದವರನ್ನು ತನಗಿಷ್ಟ ಬಂದ ಕುಲ–ಗೋತ್ರದಲ್ಲಿ ಹುಟ್ಟಿಸುತ್ತಾನೆ. ಹಾಗಿರುವಾಗ ಆ ಕುರಿತು ಅಹಂಕಾರ ಪಡುವುದರಲ್ಲಿ ಅರ್ಥವೇನಿದೆ? ಕೆಲವರಿಗೆ ಅಲ್ಲಾಹನು ಸೌಂದರ್ಯವನ್ನು ದಯಪಾಲಿಸಿರುತ್ತಾನೆ. ಅವರು ಅದರ ಬಗ್ಗೆಯೇ ಜಂಭ ಪಡುತ್ತಾರೆ. ವಸ್ತುತಃ ಅದರಲ್ಲಿ ಅವರ ನಿಯಂತ್ರಣವೇನೂ ಇರುವುದಿಲ್ಲ. ಅಲ್ಲಾಹ್ ತನಗಿಷ್ಟ ಬಂದವರನ್ನು ಸುಂದರಗೊಳಿಸುತ್ತಾನೆ ಮತ್ತು ತಾನಿಚ್ಛಿಸಿದವರನ್ನು ಕುರೂಪಿಗಳನ್ನಾಗಿಸುತ್ತಾನೆ. ಸೌಂದರ್ಯವಂತೂ ಕೃತಜ್ಞತೆಗೆ ಅರ್ಹವಾದ ಸಂಗತಿಯಾಗಿದೆಯೇ ಹೊರತು ಅಹಂಕಾರ ಪಡುವ ವಿಷಯವಲ್ಲ. ಅದೇ ರೀತಿ ಶಕ್ತಿ–ಸಾಮರ್ಥ್ಯ, ಹಿರಿಮೆ–ಗೌರವ, ಸಂಪತ್ತು–ಐಶ್ವರ್ಯ ಮತ್ತು ಪ್ರತಿಭೆಗಳ ಸ್ಥಾನವೂ ಸೌಂದರ್ಯದಂತೆಯೇ ಇರುವುದು. ಇವೆಲ್ಲವೂ ಅಲ್ಲಾಹನ ಅನುಗ್ರಹಗಳಾಗಿವೆ. ಇವು ಅಲ್ಲಾಹನ ಕೃಪೆಯಿಂದಲೇ ದೊರೆಯುವಂತಹುದು ಮತ್ತು ಅಲ್ಲಾಹನು ಬಯಸುವಷ್ಟು ಸಮಯ ಅವು ಮಾನವನ ಬಳಿ ಇರುತ್ತವೆ; ಅಂತೆಯೇ ಅಲ್ಲಾಹ್ ಬಯಸಿದಾಗ ಅವುಗಳನ್ನು ಮಾನವನಿಂದ ಕಿತ್ತುಕೊಳ್ಳುತ್ತಾನೆ. ಹೀಗಿರುವಾಗ, ಮಾನವನು ಯಾವ ವಸ್ತುವಿನ ಒಡೆಯನಾಗಿಲ್ಲವೋ, ಯಾವುದನ್ನು ಮುಂದುವರಿಸಿಕೊಂಡು ಹೋಗುವ ಸಾಮರ್ಥ್ಯವನ್ನು ಹೊಂದಿಲ್ಲವೋ, ಯಾರಿಗೂ ಅದನ್ನು ನೀಡಲಾರನೋ ಅದರ ಬಗ್ಗೆ ಅಹಂಕಾರ ಪಡಲು ಸಾಧ್ಯವೇ? ಅಹಂಕಾರ ಮತ್ತು ಜಂಭವು ಒಂದು ಯುಕ್ತಿಹೀನ ಹಾಗೂ ಮೂರ್ಖ ಕೃತ್ಯವಾಗಿದೆ. ಇದೇ ಕಾರಣಕ್ಕಾಗಿ ಅಂತಹವನಿಂದ ಒಳಿತಿನ ನಿರೀಕ್ಷೆಯನ್ನಿರಿಸಲು ಸಾಧ್ಯವಿಲ್ಲ; ಬದಲಾಗಿ ಅಂತಹವನು ಹೋದಲ್ಲೆಲ್ಲ ವಿಷಯಗಳು ಕೆಡುತ್ತಾ ಹೋಗುತ್ತವೆ. ಇಂತಹ ಗುಣವು ಯಾರಲ್ಲಿ ಬೆಳೆದು ಬರುವುದೋ ಅವನು ಆಂತರಿಕವಾಗಿ ಮಲಿನನಾಗುತ್ತಾನೆ. ಅವನ ಚಾರಿತ್ರ್ಯದಿಂದ ದುರ್ನಾತ ಹೊರಡತೊಡಗುತ್ತದೆ. ಅವನ ಅಸ್ತಿತ್ವದಿಂದ ಇಡೀ ಸಮಾಜವು ಪ್ರಭಾವಕ್ಕೀಡಾಗುತ್ತದೆ.

ಅಹಂಕಾರಕ್ಕೆ ಶಿಕ್ಷೆ

ಅಹಂಕಾರವು ಮಾನವನನ್ನು ಸಂಪೂರ್ಣವಾಗಿ ಅಳಿಸಿ ಹಾಕುತ್ತದೆ. ಅವನು ಇಹಲೋಕದಲ್ಲೂ ಅವಮಾನಿತನಾಗುತ್ತಾನೆ ಮತ್ತು ಪರಲೋಕದಲ್ಲೂ ಅವಮಾನವು ಅವನ ವಿಧಿಯಾಗಿರುತ್ತದೆ. ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿದ್ದಾರೆ,

“ಒಬ್ಬನ ಹೃದಯದಲ್ಲಿ ಸಾಸಿವೆ ಕಾಳಿನಷ್ಟಾದರೂ ಅಹಂಕಾರವಿದ್ದರೂ ಅವನು ಸ್ವರ್ಗ ಪ್ರವೇಶಿಸಲಾರನು.” (ಮುಸ್ಲಿಮ್, ಅಬೂ ದಾವೂದ್, ತಿರ್ಮಿದಿ)

ಇಹಲೋಕದಲ್ಲಿ ಹಿರಿತನ ಮೆರೆಯುವವರಿಗೆ ಪರಲೋಕದಲ್ಲಿ ನೀಡಲಾಗುವ ಯಾತನೆಯ ಬಗ್ಗೆ ಪ್ರಸ್ತಾಪಿಸುತ್ತಾ ಅಲ್ಲಾಹನ ಸಂದೇಶವಾಹಕರು(ಸ) ಹೀಗೆಂದಿದ್ದಾರೆ,

«يُحْشَرُ المُتَكَبِّرُونَ يَوْمَ القِيَامَةِ أَمْثَالَ الذَّرِّ فِي صُوَرِ الرِّجَالِ يَغْشَاهُمُ الذُّلُّ مِنْ كُلِّ مَكَانٍ، فَيُسَاقُونَ إِلَى سِجْنٍ فِي جَهَنَّمَ يُسَمَّى بُولَسَ تَعْلُوهُمْ نَارُ الأَنْيَارِ يُسْقَوْنَ مِنْ عُصَارَةِ أَهْلِ النَّارِ طِينَةَ الخَبَالِ»

“ಪುನರುತ್ಥಾನ ದಿನದಂದು ಅಹಂಕಾರಿಗಳನ್ನು ಮಾನವ ರೂಪದಲ್ಲಿಯೇ ಹಾಜರುಪಡಿಸಲಾಗುವುದಾದರೂ ಅವರ ಗಾತ್ರವು ಸಣ್ಣ ಇರುವೆಗಳಷ್ಟಿರುವುದು. ಅವರ ಮೇಲೆ ಎಲ್ಲೆಡೆಯಿಂದಲೂ ಅವಮಾನವು ಆವರಿಸಿರುವುದು. ನರಕವಾಸಿಗಳ ವಿಷಯುಕ್ತ ಪೇಯವನ್ನು ಅವರಿಗೆ ಕುಡಿಸಲಾಗುವುದು.” (ತಿರ್ಮಿದಿ)

ಪ್ರತಿಯೋರ್ವ ಮುಸ್ಲಿಮನೂ ತನ್ನ ನಿಜಸ್ಥಿತಿಯನ್ನು ಗುರುತಿಸಿಕೊಳ್ಳಬೇಕು. ಪ್ರತಿಯೋರ್ವ ಸೃಷ್ಟಿಯ ಅನಿವಾರ್ಯ ಬೇಡಿಕೆ ಮತ್ತು ವರ್ತನೆಯಾಗಬೇಕಾದ ಸೌಜನ್ಯ ಹಾಗೂ ವಿನಯವಂತಿಕೆಯು ವಸ್ತುತಃ ಒಳಿತುಗಳ ಮೂಲವಾಗಿದೆ. ಅಹಂಕಾರ ಮತ್ತು ಜಂಭವು ಕೇವಲ ಸೃಷ್ಟಿಕರ್ತನಿಗೆ ಶೋಭಿಸುವುದು. ಔನ್ನತ್ಯ ಮತ್ತು ಹಿರಿತನವೂ ಅವನದೇ ಹಕ್ಕುಗಳಾಗಿವೆ. ಅಹಂಕಾರ ಮತ್ತು ಜಂಭವು ದಾಸನನ್ನು ದಾಸ್ಯತನದ ಪರಿಧಿಯಿಂದ ಹೊರಗೆ ತರುತ್ತದೆ ಮತ್ತು ಅವನನ್ನು ಸರ್ವನಾಶ ಹೊಂದುವುದರಿಂದ ಯಾವ ವಸ್ತುವೂ ತಡೆಯಲಾರದು. ಅದೇ ವೇಳೆ ಸೌಜನ್ಯ ಮತ್ತು ವಿನಯಶೀಲತೆಯು ಮಾನವನನ್ನು ಅವನ ಮೂಲ ಸ್ಥಿತಿಯಲ್ಲಿಯೇ ಇರಿಸುತ್ತದೆ. ಅವನು ಆ ಸ್ಥಿತಿಯಲ್ಲಿದ್ದುಕೊಂಡೇ ಸತ್ಯ ಮತ್ತು ಮಿಥ್ಯಗಳ ನಡುವಿನ ವ್ಯತ್ಯಾಸವನ್ನು ಅರಿಯಬಲ್ಲನು. ಮಾರ್ಗದರ್ಶನವೇ ಅವನ ಆಗಮನವನ್ನು ಕಾಯುತ್ತಿರುತ್ತದೆ; ದೇವಸಂಪ್ರೀತಿಯು ಅವನ ಪಾರಿತೋಷಕವಾಗುತ್ತದೆ ಮತ್ತು ದೇವಸಂಪ್ರೀತಿಯ ಇನ್ನೊಂದು ಹೆಸರೇ ಸ್ವರ್ಗವಾಗಿದೆ.

* * * * *

www.uzairfalahi.com